1	2	3	4	5
	ಬೆಳಗಾಂ ಜಿಲ್ಲೆ			
1.	ಖಾನಾಪುರ	0.25	0.07	28.00
2.	ಸಂಕೇಶ್ವರ್	0.50	0.10	20.59
3.	ಬೈಲಹೊಂಗಲ	1.06	0.19	11.35
4.	ಹುಕ್ಕೇರಿ	0.62	0.02	3.90
5.	ಗೋಕಾಕ್	1.00	0.33	33.12

ವಿಷಯ :- ಬೆಂಗಳೂರು ದಕ್ಷಿಣ ತಾಲ್ಲೂಕು ತುಬರ ಹಳ್ಳಿ ಗ್ರಾಮದ ಸರ್ವೆ ನಂ. 6-2, 6-3 ರಲ್ಲಿನ ಜಮೀನನ್ನು ವಸತಿ ಉದ್ದೇಶಕ್ಕಾಗಿ ವಿನಾಯಿತಿ.

Q:1560

ಶ್ರೀ ಗೋಪಾಲ ಮುಕುಂದ ಕಾನಡೆ (ಶಿರಸಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ತುಬರನಹಳ್ಳಿ ಗ್ರಾಮದ ಸರ್ವೆ ನಂ.6-2, 6-3ರಲ್ಲಿನ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ವಿನಾಯಿತಿ ನೀಡಿದ್ದುದು ನಿಜವಲ್ಲವೆ?

ಆ) ಸದರಿ ಜಮೀನನ್ನು ವಸತಿ ಉಪಯೋಗಕ್ಕಾಗಿ ವಿನಾಯಿತಿ ನೀಡಬೇಕೆಂದು ಜಮೀನಿನ ಮಾಲೀಕರು ಕೋರಿದ್ದುದೂ ನಿಜವಲ್ಲವೆ ?

ಇ) ದಿನಾಂಕ : 9-12-92ರಂದು ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು, ವೈಯಕ್ತಿಕ ವಿಚಾರಣೆ ನಡೆಸಿ, ವಸತಿ ಉದ್ದೇಶಕ್ಕಾಗಿ ವಿನಾಯಿತಿ ನೀಡಿ, ಆದೇಶ ನೀಡಿದ್ದುದೂ ನಿಜವಲ್ಲವೆ?

ಉ) ಹಾಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈವರೆಗೂ ಮಾನ್ಯ ಮಂತ್ರಿಗಳ ಆದೇಶವನ್ನು ಜಾರಿಗೊಳಿಸದಿರುವುದಕ್ಕೆ ಕಾರಣವೇನು?

ಊ) ಈಗಲಾದರೂ ಸರ್ಕಾರದವರು ಮಂತ್ರಿಗಳ ಆದೇಶವನ್ನು ಜಾರಿಗೊಳಿಸದಿರುವ ಬಗ್ಗೆ ವಿಚಾರಣೆ ನಡೆಸಿ ಆದೇಶವನ್ನು ಜಾರಿಗೊಳಿಸುವರೆ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಹೌದು.

ಇ) ದಿನಾಂಕ : 9-12-92 ರಂದು ಈ ವಿಷಯದಲ್ಲಿ ವಿಚಾರಣೆ ನಡೆದಿಲ್ಲ.

ಈ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.